

# ಚಿರಯೌವನ..






ನೀವೇನಾದರೂ ಸ್ಯಾಮ್ ಸನ್ನಿ ಬ್ರಯಾಂತ್‌ನನ್ನು ನೋಡಿದರೆ ಈತನು 40 ವರ್ಷದವನಿರಬೇಕೆಂದು ಅಂದು ಕೊಳ್ಳುವಿರಿ. ಅಂತಹ ಕಟ್ಟುಮಸ್ತಾದ ಅಂಗಸೌಷ್ಟವ ಈತನದು. ಯುವಕರನ್ನೂ ನಾಚಿಸುವ ಈ ಬಾಡಿಬಿಲ್ಡರ್‌ನ ವಯಸ್ಸೆಷ್ಟು ಗೊತ್ತೇ? ಬರೋಬ್ಬರಿ 70 ವರ್ಷಗಳು! ದಿನಕಳೆದಂತೆ ಈತ ಇನ್ನೂ ಹೆಚ್ಚು ಹೆಚ್ಚು ಬಲಾಢ್ಯನಾಗುತ್ತಲೇ ಇದ್ದಾನೆ.

'ನಾನು ಯಾವಾಗ ನಿವೃತ್ತಿ ಹೊಂದುತ್ತೇನೆಂದು ಎಲ್ಲರೂ ಕೇಳುತ್ತಿರುತ್ತಾರೆ. ಆದರೆ ಅಂಗಸಾಧನೆ ಮಾಡುವುದರಿಂದ ನಿವೃತ್ತಿಯ ಪ್ರಶ್ನೆಯೇ ಇಲ್ಲ' ಎಂದು ನುಡಿಯುವ ಸ್ಯಾಮ್ ಸನ್ನಿಯು ತನ್ನ 44 ನೇ ವಯಸ್ಸಿನಿಂದ ಕಸರತ್ತನ್ನು ಮಾಡಲು ಪ್ರಾರಂಭಿಸಿದನಂತೆ. ದಾಂಪತ್ಯದಲ್ಲಿ ವೈಮನಸ್ಸು ತಲೆದೋರಿದಾಗ, ತನ್ನ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲೆಂದು ಮೊದ ಮೊದಲು ಈತ ಜಿಮ್‌ಗೆ ಹೋಗಲು ಶುರುಮಾಡಿದ. ಸುಮಾರು 11 ತಿಂಗಳ ಸಾಧನೆಯ ಬಳಿಕ ಈತನ ತರಬೇತುದಾರ, ಬಾಡಿ ಬಿಲ್ಡಿಂಗ್ ಸ್ಪರ್ಧೆಯೊಂದರಲ್ಲಿ ಭಾಗವಹಿಸಲು ಸಲಹೆ ಕೊಟ್ಟಾಗ, ಮೊದಲು ಅನುಮಾನಿಸಿದರೂ ನಂತರ ಒಪ್ಪಿಕೊಂಡು ಜಾರ್ಜಿಯಾದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿದ. ಅಲ್ಲಿ ಎರಡು ವಿಭಾಗಗಳಲ್ಲಿ ಸ್ಪರ್ಧಿಸಿ 4 ಹಾಗೂ 5 ನೆಯ ಬಹುಮಾನ ಪಡೆದಾಗ ಕಸರತ್ತಿನಲ್ಲಿ ಇನ್ನೂ ಹೆಚ್ಚಿನದನ್ನು ಸಾಧಿಸಬೇಕೆಂಬ ಆಸೆ ಮೊಳೆಯಿತು. ಅಂದಿನಿಂದ ಜಿಮ್ ಮಾಡುವುದು ಸ್ಯಾಮ್ ಸನ್ನಿಗೆ ಅತ್ಯಂತ ಇಷ್ಟವಾದ ಕೆಲಸವಾಯಿತು.

'ವಯಸ್ಸಾದಂತೆಲ್ಲಾ ನಾವು ಮುದುಕರಾಗುತ್ತೇವೆ ಎಂದೇ ಎಲ್ಲರೂ ತಪ್ಪಾಗಿ ಭಾವಿಸುತ್ತಾರೆ. ಆದರೆ ನಿಮ್ಮ ಮನಸ್ಥಿತಿಯೇ ನಿಮ್ಮನ್ನು ಮುದುಕರನ್ನಾಗಿ ಮಾಡುತ್ತದೆ. ಅಲ್ಲದೆ ವಯಸ್ಸು ಎನ್ನುವುದು ಕೇವಲ ಸಂಖ್ಯೆ ಮಾತ್ರ' ಎನ್ನುವುದು ಬ್ರಯಾಂತ್‌ನ ಸ್ಪಷ್ಟ ನಿಲುವು. ನಿಮಗೆ ವಯಸ್ಸಾಗಲಿ, ಆಗ ನಿಮಗೆ ಗೊತ್ತಾಗುತ್ತೆ ಎಂದು ನುಡಿದ ಕೆಲ ಜನರು ಈತನ ನಿಜ ವಯಸ್ಸನ್ನು ತಿಳಿದಾಗ ಆಶ್ಚರ್ಯಪಡುತ್ತಾರೆ. 'ವಯಸ್ಸಾಯಿತು ಎಂದು ನೀವು ಅಂದುಕೊಂಡರೆ ನಿಮ್ಮ ದೇಹದ ಶಕ್ತಿಯೂ ಕ್ಷೀಣಿಸುತ್ತದೆ. ಆಗ ನಿಜವಾಗಿಯೂ ನೀವು ಮುದುಕರಾಗಿಬಿಡುತ್ತೀರ. ಸೋಮಾರಿತನದಿಂದ ಕಾಲಕಳೆಯದೇ ಯಾವುದಾದರೂ ಚಟುವಟಿಕೆಯಲ್ಲಿ ಪಾಲ್ಗೊಳ್ಳಿ' ಎನ್ನುವ ಬ್ರಯಾಂತ್ ಹಲವಾರು ಯುವಕರಿಗೆ 'ರೋಲ್ ಮಾಡೆಲ್' ಕೂಡಾ ಆಗಿದ್ದಾನೆ. ಅಂದ ಹಾಗೆ ಕಳೆದ ಜುಲೈನಲ್ಲಿ ಜಾರ್ಜಿಯಾದ ಮ್ಯಾಕನ್‌ನಲ್ಲಿ ನಡೆದ ಐಎನ್‌ಬಿಎಫ್ ಸದರ್ನ್ ನ್ಯಾಚುರಲ್ ಬಾಡಿ ಬಿಲ್ಡಿಂಗ್ ಅಂಡ್ ಫಿಗರ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಬ್ರಯಾಂತ್ ಬಲು ಉತ್ಸಾಹದಿಂದ ಭಾಗವಹಿಸಿದ್ದಾನೆ.

■ ವಿನಯ್ ಕುಮಾರ್ ವಿ.ಹೆಚ್.